communities have been included in Group 'A'. Now, the hon.Member is urging to include this community in the list of Schedules Tribes. The State Government cannot include it in the list of Scheduled Tribes. The competent authority to include the communities in the list of Scheduled Tribe in the Central Government. Under these circumstances we cannot include this community in the list of Scheduled Tribes.

SRI K.C. MODGEKAR DESAI:- How much tiem will it take to include that community in the Scheduled Tribes list?

SRI B. SHIVANNA:- We can consider. We have constituted very recently a Committee on 5-1-90. But we can consider. It is not up to the Karnataka Government to include any community in the SCs & STs list. It is only upto the Government of India to do it.

MR. SPAKER:- You can make recommendations. You are convinced.

SRI B. SHIVANNA:- That is the power vested with the Government.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮಂತ್ರಿಗಳ ಉತ್ತರದಿಂದ 2 ಪ್ರಶ್ನೆಗಳು ಉದ್ಭವವಾಗುತ್ತದೆ. ಒಂದು ತಮ್ಮ ಆಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೀರಿ, ಆ ಸಮಿತಿಯಲ್ಲಿ ಇವರ ಬೇಡಿಕೆಯನ್ನು ಪರಿಶೀಲಿಸುತ್ತೀರಾ ಆಥವಾ ಇಲ್ಲವೇ? ಆವರ ಅರ್ಜಿಯನ್ನು ತೆಗೆದುಕೊಂಡು ಬರುತ್ತೀರಾ ಸಮಿತಿಯ ಮುಂದೆ? ನನ್ನನ್ನೂ ಆದರ ಸದಸ್ಯನನ್ನಾಗಿ ಮಾಡಿಕೊಂಡಿದ್ದೀರಿ. 2ನೆಯದು ತಕ್ಷಣ ಅಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಗದ ಜನರಿಗೆ ಅಲ್ಲಿನ ಸ್ಥಳೀಯ ಅಧಿಕಾರಿಗಳಾದ ತಹಸೀಲ್ದಾರ್‌ರವರಾಗಲಿ, ಡಿ.ಸಿ.ಯವರಾಗಲಿ, ತಹಸೀಲ್ದಾರ್‌ರಂತೂ ಆಗಾಗ ಬದಲಾವಣೆ ಯಾಗುತ್ತಿರುತ್ತಾರೆ. ಇದರಿಂದ ಅಲ್ಲಿ ಬಹಳಷ್ಟು ಕನ್‌ಫ್ಯೂಸನ್ ಇದೆ. 2-3 ವರ್ಷಗಳ ಹಿಂದ ದೊಡ್ಡ ಸತ್ಯಾಗ್ರಹವನ್ನೇ ಬೆಳಗಾಂನಲ್ಲಿ ಮಾಡಿದರು. ದಯಮಾಡಿ ತಾವು ಅಲ್ಲಿಗೆ ಹೋಗಿ ಒಂದು ಸಭೆಯನ್ನು ಮಾಡಿ ಇದರ ಬಗ್ಗೆ ವಿವರಣೆಯನ್ನು ತಮ್ಮ ಸೆಕ್ರೆಟರಿಯವರ ಮೂಲಕ ಕೊಡುವುದಕ್ಕೆ ಸಾಧ್ಯವೇ? ಕೊಟ್ಟರೆ ಅನುಕೂಲವಾಗುವುದಿಲ್ಲವೆ?

SRI B. SHIVANNA:- ಆಗಬಹುದು. ಆದರೆ ಸದ್ಯಕ್ಕೆ They are in Backward Tribe. They are competent to take that certificate and those certificates will be issued by the competent authority. SCs & STs Certificates cannot be given. We can recommend this to the Govt. of India, as you are also one of the Members of the Committee constituted by the Karnataka Government.

ನಿರ್ಗತಿಕ ಮಕ್ಕಳ ಕುಟೀರಗಳ ಬಗ್ಗೆ.

1627 ಶ್ರೀಮತಿ ದಮಯಂತಿ ಬೋಗೌಡ (ಶ್ರೀರಂಗಪಟ್ಟಣ):- ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸರ್ಕಾರದಿಂದ ಸಹಾಯ ಧನ ಪಡೆಯುತ್ತಿರುವ ನಿರ್ಗತಿಕ ಮಕ್ಕಳ ಕುಟೀರಗಳೆಷ್ಟು;

ಆ) 1989-90ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣ ಹಾಗೂ ಬಿಡುಗಡೆ ಮಾಡಿದ ದಿನಾಂಕ.

ಇ) ಆಯುಷ್ಯಯ ಬಿಡುಗಡೆಗೆ ತಡವಾದುದಕ್ಕೆ ಕಾರಣ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು.):-

ಅ) 194

ಆ) 1989-90ನೇ ಸಾಲಿನಲ್ಲಿ ರೂ.33.90 ಲಕ್ಷಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲೂ ರೂ.29.41 ಲಕ್ಷ.ಗಳನ್ನು ರಾಜ್ಯವಲಯದ ಕುಟೀರಗಳಿಗೂ ಬಿಡುಗಡೆ ಮಾಡಲಾಗಿದೆ.

ಇ) ದಿನಾಂಕ 30-3-90ರಂದು ಸರ್ಕಾರದಿಂದ 2ನೇ ಹಾಗೂ 3ನೇ ಕಂತು ಅನುದಾನ ಬಿಡುಗಡೆಯಾಗುತ್ತದೆ.

ಈ) ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಕೇಂದ್ರ ಸರ್ಕಾರದಿಂದ ತಡವಾಗಿ ಹಣ ಬಿಡುಗಡೆಯಾಗಿರುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:- ಕಾಟೇಜುಗಳು 194 ಅಂತ ಉತ್ತರ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ 33.90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಕುಟೀರಗಳಿಗೆ ಬಿಡುಗಡೆ ಮಾಡಲಾಗಿದೆ ಎಂಬುದಾಗಿ ಹೇಳಿದ್ದೀರಿ. ಮೊದಲ ಕಂತು ಯಾವಾಗ ಬಿಡುಗಡೆ ಮಾಡಿದ್ದೀರಿ? 2-3 ಕಂತನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿದ್ದೀರಿ. 30-3-90ರಲ್ಲಿ ಸರ್ಕಾರದಿಂದ 2 ಹಾಗೂ 3 ಕಂತನ್ನು ಬಿಡುಗಡೆ ಮಾಡಿದ್ದೀರಿ. ಹಾಗಿದ್ದರೆ ಮೊದಲ ಕಂತನ್ನು ಯಾವಾಗ ಬಿಡುಗಡೆ ಮಾಡಿದ್ದೀರಿ?

ಶ್ರೀ ಬಿ. ಶಿವಣ್ಣ:- ನಮ್ಮಲ್ಲಿ ಇರತಕ್ಕಂತಹ 194 ಕಾಟೇಜಸ್. ಕೇಂದ್ರ ಸರ್ಕಾರ 33.90 ಲಕ್ಷ ರೂಪಾಯಿಗಳನ್ನು ಹಾಗೂ ರಾಜ್ಯ ಸರ್ಕಾರ 29.41 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಕೆಲವು ಯೂನಿಟ್‌ಗಳಿಗೆ ದುಡ್ಡು ಸರಿಯಾದ ಸಮಯಕ್ಕೆ ಸಿಕ್ಕಿಲ್ಲ, ಆದರೆ ನಮಗೆ ಸರ್ಕಾರದಿಂದ ಹಣ ರಿಲೀಸ್ ಆದದ್ದು 30-3-90ರಲ್ಲಿ ಆ ಕಾರಣದಿಂದ ಸ್ವಲ್ಪ ತಡವಾಗಿದೆ ಈಗ ಹಣ ಬಿಡುಗಡೆ ಆಗಿರುವುದರಿಂದ ಸಂಬಂಧಪಟ್ಟವರಿಗೆ ಹಣವನ್ನು ರಿಲೀಸ್ ಮಾಡಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ:- ಒಂದೊಂದು ಕಾಟೇಜ್‌ನಲ್ಲಿ ನಿರ್ಗತಿಕ ಮಕ್ಕಳು ಎಷ್ಟು ಜನ ಇರುತ್ತಾರೆ?

ಶ್ರೀ ಬಿ. ಶಿವಣ್ಣ:- ಸಧ್ಯಕ್ಕೆ ಆ ವಿವರ ನನ್ನಲ್ಲಿಲ್ಲ. ಅದು ತಮಗೇ ಗೊತ್ತಿರಬೇಕಲ್ಲ. ಏಕೆಂದರೆ ತಾವೂ ಅಂತಹ ಸಂಸ್ಥೆಯನ್ನು ನಡೆಸುತ್ತಿದ್ದೀರಿ.

ಶ್ರೀಮತಿ ದಮಯಂತಿ ಬೋರೇಗೌಡ:- ರಾಜ್ಯ ಸರ್ಕಾರ ಯಾವಾಗ ಹಣವನ್ನು ಬಿಡುಗಡೆ ಮಾಡಿದೆ? ಕೇಂದ್ರ ಸಕಾರದಿಂದ ಹಣ ಬಿಡುಗಡೆಯಾಗುವುದು ತಡವಾಯಿತು ಅಂತ ಹೇಳಿದ್ದೀರಿ. ಹಾಗಿದ್ದರೆ ಕೇಂದ್ರ ಸರ್ಕಾರದಿಂದ ಯಾವ ತಾರೀಖಿನಲ್ಲಿ ಹಣ ಬಿಡುಗಡೆಯಾಯಿತು?

ಶ್ರೀ ಬಿ. ಶಿವಣ್ಣ:- ಒಂದೊಂದು ಕಾಟೇಜ್‌ನಲ್ಲಿ 25 ಮಕ್ಕಳು ಇದ್ದಾರೆ. ಆಮೇಲೆ ರಾಜ್ಯ ಸರ್ಕಾರ 30-3-90ಕ್ಕೆ ಹಣವನ್ನು ಬಿಡುಗಡೆ ಮಾಡಿದೆ. ತಕ್ಷಣ ಸಂಸ್ಥೆಗಳವರಿಗೂ ನಾವು ಹಣವನ್ನು ಕೊಟ್ಟಿದ್ದೇವೆ. ನಾವು ಕೊಟ್ಟ ಕೂಡಲೇ ಅವರೂ ಸಹ ಹಣ ಬಿಡುಗಡೆ ಮಾಡುತ್ತಾರೆ. ಈ ಸಾರಿ ಮಾತ್ರ ತಡವಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ:- ನಮ್ಮಲ್ಲಿ ಬಜೆಟ್ ಪ್ರಾವಿಜನ್ ಕೂಡ ಕಡಿಮೆ ಇಟ್ಟುಕೊಂಡಿದ್ದದೀರಿ. ಆದು ಏಕೆ? Depending on the number of Cottages. Provision should have been made in the budget. Don't you think so?

ಶ್ರೀ ಬಿ. ಶಿವಣ್ಣ:- 10 ಪರ್ಸೆಂಟ್ ಸಂಸ್ಥೆಯವರು ಕೊಟ್ಟರೆ 90 ಪರ್ಸೆಂಟ್ ಅನುದಾನವನ್ನು ಸರ್ಕಾರ ಕೊಡುತ್ತದೆ. ಈ ಬಗ್ಗೆ ಹಣಕಾಸಿನ ಸಚಿವರ ಜೊತೆಗೆ ಚರ್ಚೆ ಮಾಡಿ ಅವರಿಗೆ ಇನ್ನು ಹೆಚ್ಚಿನ ಸಹಾಯ ಮಾಡುತ್ತೇನೆ.

ಶ್ರೀಮತಿ ದಮಯಮತಿ ಬೋರೇಗೌಡ:- ಈ ಸ್ವಯಂ ಸೇವಾ ಸಂಸ್ಥೆಗಳು ಉಳಿದುಕೊಳ್ಳುವಂತೆಯೇ ಇಲ್ಲ. ಸನ್ಮಾನ್ಯ ಮಂತ್ರಿಗಳಿಗೆ ಮಕ್ಕಳನ್ನು ಸಾಕುವ ಕಷ್ಟ ಗೊತ್ತಿಲ್ಲ. 125 ರಿಂದ 150 ಮಕ್ಕಳನ್ನು ವರ್ಷವೆಲ್ಲಾ ಸಾಕಬೇಕೆಂದರೆ ಎಷ್ಟು ಕಷ್ಟವೆಂಬುದು ತಮಗೂ ಗೊತ್ತಿದೆ.

ಈಗ ಸಾಲಸೋಲ ಮಾಡಿ ಈ ಮಕ್ಕಳನ್ನು ಸಾಕುತ್ತಿದ್ದೇವೆ. ಇದಕ್ಕೆ ಬದಲು ಈ ಮಕ್ಕಳನ್ನು ಸರ್ಕಾರದ ಸಂಸ್ಥೆಗಳಿಗೆ ಸೇರಿಸಿಕೊಂಡು ಬಿಡಿ. ನಾವು ಕಳಿಸಿಕೊಡುತ್ತೇವೆ.

ಶ್ರೀ ಬಿ. ಶಿವಣ್ಣ:- ಇದನ್ನು ಪರಿಶೀಲನೆ ಮಾಡಿ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:- ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ಸುಮಾರು ಎರಡು ವಾರಗಳವರೆಗೆ ಗ್ರಾಂಟನ್ನು ತೆಗೆದುಕೊಳ್ಳುವುದಕ್ಕೋಸ್ಕರ ಕಛೇರಿಗಳಿಗೆ ಅಲೆದಲೆದು ಸಾಕಾಗಿಹೋಯಿತು. ಇದೇ ರೀತಿ ಮುಂದುವರಿಯುವುದಾದರೆ ದಯವಿಟ್ಟು ಆ ಮಕ್ಕಳನ್ನು ತಮ್ಮ ಹತ್ತಿರವೇ ಕರೆದುಕೊಳ್ಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್:- ಮಕ್ಕಳ ವಿಷಯ ಅವರಿಗೆ ಗೊತ್ತಿಲ್ಲ.

SRI M. RAJASHEKAR MURTHY:- This is one of the most important functions of the State Government. I will be liberal with regard to providing grants. I will see that the matter is set-right.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ರಾಜಶೇಖರಮೂರ್ತಿ ಅವರಿಗೆ ಇದರ ಕಷ್ಟ ಗೊತ್ತಿದೆ. ಆದ್ದರಿಂದ.....

ಅಧ್ಯಕ್ಷರು:- ಅವರು ಉತ್ತರ ಹೇಳಿದ ಮೇಲೆ ಶಿವಣ್ಣನವರನ್ನು ನೀವು ಬಿಟ್ಟುಬಿಡಿ.

ಶ್ರೀ ಬಿ. ಶಿವಣ್ಣ:- ಇದು ಮಾನ್ಯ ಸಿಂಧ್ಯರವರ ಕಾಲದಲ್ಲಿ ಆಗಿದ್ದು, ಅವರೇ ಮಾಡಬಹುದಾಗಿತ್ತು.

ಶ್ರೀ ವಾಟಾಳ್ ನಾಗರಾಜ್:- ಮಕ್ಕಳ ಕಷ್ಟ ಅವರಿಗೆ ಗೊತ್ತಾಗುವವರೆಗೆ ಈ ಇಲಾಖೆಯನ್ನು ಅವರಿಂದ ಬೇರ್ಪಡಿಸಿಕೊಡುವುದು ಒಳ್ಳೆಯದು.

ಮೊಳಕಾಲ್ಮೂರ ತಾಲ್ಲೂಕ್ ಡಾರ್ಕ್ ಏರಿಯ ಎಂದು ಘೋಷಣೆ ಮಾಡಿದ ಬಗ್ಗೆ.

1572 ಶ್ರೀ ಎನ್.ಬಿ.ನಾಯಕ್ (ಮೊಳಕಾಲ್ಮೂರು):- ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.:-

ಅ) ಮೊಳಕಾಲ್ಮೂರು ತಾಲ್ಲೂಕನ್ನು ಡಾರ್ಕ್ ಏರಿಯಾ ಎಂದು ಘೋಷಣೆ ಮಾಡಿರುವುದು ನಿಜವೆ;

ಆ) ಆದಕ್ಕೆ ಕಾರಣವೇನು?

ಇ) ಈಗ ಆ ಡಾರ್ಕ್ ಪ್ರದೇಶವನ್ನು ತೆಗೆಯಲು ಸರ್ಕಾರದವರು ತೆಗೆದುಕೊಂಡು ಕ್ರಮವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು):-

ಅ) ಹೌದು.

ಆ) ಈ ತಾಲ್ಲೂಕಿನಲ್ಲಿ 1-1-1987ರ ವೇಳೆಯ ಅಂದಾಜಿನಂತೆ ಅಂತರ್ಜಲದ ಬಳಕೆಯು ವಾರ್ಷಿಕ ನಿವ್ವಳ ಲಭ್ಯ. ಪ್ರಮಾಣದ ಶೇ.89ರಷ್ಟಿತ್ತು. ನಿಗದಿಯಾದ ಶೇ.85 ಕ್ಕೂ ಹೆಚ್ಚು ಬಳಕೆಯಾಗುತ್ತಿದ್ದ ಕಾರಣ, ಈ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ವರ್ಗೀಕರಿಸಲಾಯಿತು.

1989-90ನೇ ವರ್ಷದಲ್ಲಿ ಈ ತಾಲ್ಲೂಕಿನ ನೀರಾವರಿ ಬಾವಿಗಳಿಗೆ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸಿ ಮಾಡಿದ ಕಿರು ಜಲಾನಯನಾಧಾರಿತ ಅಂತರ್ಜಲ ಪುನರ್ ಮೌಲೀಕರಣೆ ಕೂಡ ಈ ತಾಲ್ಲೂಕು ಕಪ್ಪು ವರ್ಗದಲ್ಲೇ ಇರುವುದನ್ನು ದೃಢೀಕರಿಸಿದೆ. ಆದ್ದರಿಂದ ಈ ದಿಶೆಯಲ್ಲಿ ಯಾವದೇ ಕ್ರಮ ಅನಗತ್ಯ.